**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಕೆ.ಆರ್.ವೃತ್ತ, ಬೆಂಗಳೂರು – 560 001**

ಸಂಖ್ಯೆ: ಸಶಿಅ/ಆ/ಸಿ5/ಬಿ.ಆರ್.ಪಿ/ಸಿ.ಆರ್.ಪಿ/ಪರೀಕ್ಷೆ/2017 ದಿನಾಂಕ: 09-03-2017

## ಅಧಿಕೃತ ಜ್ಞಾಪನ

**ವಿಷಯ:** ಬಿ.ಆರ್.ಪಿ (ಪ್ರಾಥಮಿಕ)/ ಸಿ.ಆರ್.ಪಿ ಹಾಗೂ ಬಿ.ಆರ್.ಪಿ (ಪ್ರೌಢ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿಯ ಅಧಿಕೃತ ಜ್ಞಾಪನ ಸಂಖ್ಯೆ: ಸಶಿಅ/ಆ/ಸಿ5/ಬಿ.ಆರ್.ಪಿ/ಸಿ.ಆರ್.ಪಿ/ಪರೀಕ್ಷೆ/2016-17 ದಿನಾಂಕ: 09.03.2017.

*&*&*&*

2017-18 ನೇ ಸಾಲಿಗೆ ಬಿ.ಆರ್.ಪಿ(ಪ್ರಾಥಮಿಕ) / ಸಿ.ಆರ್.ಪಿ ಮತ್ತು ಬಿ.ಆರ್.ಪಿ (ಪ್ರೌಢ) ಖಾಲಿ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಸಿ ಭರ್ತಿ ಮಾಡಲು ಉಲ್ಲೇಖಿತ ಅಧಿಕೃತ ಜ್ಞಾಪನದಲ್ಲಿ ವಿವರವಾದ ಮಾರ್ಗಸೂಚಿ ನೀಡಿದ್ದು, ಅದರಂತೆ ಕ್ರಮ ವಹಿಸಲು ತಿಳಿಸಲಾಗಿದೆ.

ಬಿ.ಆರ್.ಪಿ (ಪ್ರಾಥಮಿಕ)/ ಸಿ.ಆರ್.ಪಿ ಮತ್ತು ಬಿ.ಆರ್.ಪಿ (ಪ್ರೌಢ) ಹುದ್ದೆಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ 03 ವರ್ಷಗಳ ಕಾರ್ಯಾವಧಿ ನಿಗದಿ ಪಡಿಸಲಾಗಿದೆ. ಅದರಂತೆ ದಿನಾಂಕ: 31.03.2017 ಕ್ಕೆ ಬಿ.ಆರ್.ಪಿ (ಪ್ರಾಥಮಿಕ)/ ಸಿ.ಆರ್.ಪಿ ಮತ್ತು ಬಿ.ಆರ್.ಪಿ (ಪ್ರೌಢ) ಹುದ್ದೆಗಳಲ್ಲಿ 03 ವರ್ಷ ಪೂರ್ಣಗೊಳಿಸಿರುವ ಎಲ್ಲಾ ಶಿಕ್ಷಕರು ಮತ್ತು ಪದವೀಧರ ಮುಖ್ಯ ಶಿಕ್ಷಕರನ್ನು ಕೌನ್ಸಿಲಿಂಗ್ ಮೂಲಕ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಬೇಕಾಗಿರುತ್ತದೆ.

ದಿನಾಂಕ: 31.03.2017 ಕ್ಕೆ 03 ವರ್ಷ ಸೇವೆಯನ್ನು ಪೂರ್ಣಗೊಳಿಸುವ ಬಿ.ಆರ್.ಪಿ / ಸಿ.ಆರ್.ಪಿ ಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ, ದಿನಾಂಕ 07.04.2017 ರಂದು ಕೌನ್ಸಿಲಿಂಗ್ ಮೂಲಕ ಪ್ರಾಥಮಿಕ / ಪ್ರೌಢ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಲು ಸೂಚಿಸಿದೆ.

ಪ್ರಾಥಮಿಕ ಬಿ.ಆರ್.ಪಿ./ಸಿ.ಆರ್.ಪಿಗಳ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ಎರಡು ಹಂತದ ನೇಮಕಾತಿ ಪ್ರಾಧಿಕಾರದಿಂದ ನೇಮಕಗೊಂಡ ಶಿಕ್ಷಕರು ಇರುತ್ತಾರೆ. ಆದ್ದರಿಂದ, ಉಪನಿರ್ದೇಶಕರು ನೇಮಕಾತಿ ಆದೇಶ ನೀಡಿದ ಜಿಲ್ಲಾ ಘಟಕದ ಶಿಕ್ಷಕರಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೇಮಕಾತಿ ಆದೇಶ ನೀಡಿರುವ ಬ್ಲಾಕ್ ಘಟಕದ ಶಿಕ್ಷಕರಿಗೆ ಸಂಬಂಧಿಸಿದ ಬ್ಲಾಕ್ ವ್ಯಾಪ್ತಿಯಲ್ಲಿ ಮಾತ್ರ ಸ್ಥಳ ಆಯ್ಕೆಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು.

ಪು.ತಿ.ನೋ...

ಪ್ರೌಢ ಶಾಲಾ ಬಿ.ಆರ್.ಪಿಗಳಾಗಿ ಕರ್ತವ್ಯನಿರ್ವಹಿಸುತ್ತಿರುವ ಶಾಲಾ ಶಿಕ್ಷಕರಿಗೂ ದಿನಾಂಕ 07.04.2017 ರಂದು ಜಿಲ್ಲಾ ಹಂತ ಕೌನ್ಸಿಲಿಂಗ್ ನಡೆಸಿ, ಸ್ಥಳ ನಿಯುಕ್ತಿಗೊಳಿಸುವುದು. ಕೌನ್ಸಿಲಿಂಗ್ ನಡೆಸಿದ ಕೂಡಲೇ ಅಂದರೆ ದಿ; 09.04.2017 ರೊಳಗೆ ಸ್ಥಳ ನಿಯುಕ್ತಿಗೊಂಡ ಶಾಲೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸುವುದು.

ದಿನಾಂಕ: 31.03.2017 ಕ್ಕೆ 3 ವರ್ಷ ಪೂರ್ಣಗೊಳ್ಳುವ ಬಿ.ಆರ್.ಪಿ.(ಪ್ರಾಥಮಿಕ), (ಪ್ರೌಢ), ಹಾಗೂ ಸಿ.ಆರ್.ಪಿ ಗಳನ್ನು ಕೂಡಲೇ ಬಿಡುಗಡೆಗೊಳಿಸಿ ಸ್ಥಳ ನಿಯುಕ್ತಿಗೊಂಡ ಶಾಲೆಗಳಿಗೆ ಹಾಜರಾಗಲು ಸೂಚಿಸುವುದು. ಒಂದು ವೇಳೆ, ಇಂತಹ ಬಿ.ಆರ್.ಪಿ/ಸಿ.ಆರ್.ಪಿ ಗಳನ್ನು ಮುಂದುವರೆಯಲು ಅವಕಾಶ ಮಾಡಿದಲ್ಲಿ ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ವಿರುದ್ಧ ನಿಯಮಾನುಸಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.

ಈ ಬಗ್ಗೆ ದಿನಾಂಕ 11.04.2017 ರೊಳಗೆ ರಾಜ್ಯ ಕಛೇರಿಗೆ ವರದಿ ಮಾಡುವುದು.

**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ**

**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಇವರಿಗೆ ಕ್ರಮಕ್ಕಾಗಿ**

1) ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ ಡಯಟ್) ಸೂಕ್ತ ಕ್ರಮಕ್ಕಾಗಿ.
3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಅಗತ್ಯ ಕ್ರಮಕ್ಕಾಗಿ.

**ಪ್ರತಿ ಸಂಬಂಧಿಸಿದವರಿಗೆ ಮಾಹಿತಿಗೆ ಕಳುಹಿಸಿದೆ:**

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
3) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
5) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ.
6) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
7) ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು.
8) ನಿರ್ದೇಶಕರು (ಕಾ), ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.

C:\Users\Admin\Desktop\BRP-CRP Examination 2017.docx